ಸಿ. ಸಿ. ನಂ.- **92/2021**

ಸಿ.ಡಬ್ಲ್ಯೂ- **1** / ಪಿ.ಡಬ್ಲ್ಯೂ- **1**

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಹೊಸಪೇಟೆ.
ಸಾಕ್ಷಿಯನ್ನು ದಿನಾಂಕ **16-09-2023** ರಂದು ಪ್ರಾಮಾಣೀಕರಿಸಲಾಯಿತು.

| | |
|---|---|
| ಸಾಕ್ಷಿ ಹೆಸರು - | ಜಿ. ಕೃಷ್ಣಮೂರ್ತಿ |
| ತಂದೆ / ಗಂಡನ ಹೆಸರು - | ವೀರಣ್ಣ |
| ವಯಸ್ಸು - | **64** ವರ್ಷಗಳು |
| ಉದ್ಯೋಗ - | ನಿವೃತ್ತ ಮ್ಯಾನೇಜರ್, ಎಸ್.ಬಿ.ಐ ಬ್ಯಾಂಕ್ |
| ವಾಸಸ್ಥಳ - | ಬಳ್ಳಾರಿ |

ಮುಖ್ಯ ವಿಚಾರಣೆ- ಎ. ಪಿ. ಪಿ. ಅವರಿಂದ-

ನಾನು ಸೆಪ್ಟೆಂಬರ್ **2014** ರಿಂದ ದಿಃ **30-04-2017** ರವರೆಗೆ ಎಸ್.ಬಿ.ಹೆಚ್(ಎಸ್.ಬಿ.ಐ), ಬಳ್ಳಾರಿಯಲ್ಲಿ ಚೀಫ್ ಮ್ಯಾನೇಜರ್ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ಆರೋಪಿಯವರು ಕೊಪ್ಪಳದ ಮುಖ್ಯ ಬ್ಯಾಂಕ್ ನಲ್ಲಿ **2011** ರಲ್ಲಿ ಸಿಂಗಲ್ ವಿಂಡೋ ಆಪರೇಟರ್(ಎಸ್.ಡಬ್ಲ್ಯೂ.ಓ) ಎಂದು ನೇಮಕವಾಗಿರುತ್ತಾರೆ. ಜುಲೈ-**2013** ರಲ್ಲಿ ಹೊಸಪೇಟೆಯ ಶಾಖೆಗೆ ವರ್ಗಾವಣೆಯಾಗಿ ಬಂದಿರುತ್ತಾರೆ. ಅವರು ಎಸ್.ಡಬ್ಲ್ಯೂ.ಓ ಆಗಿ ಹೊಸಪೇಟೆ ಶಾಖೆಯಲ್ಲಿ ಕೆಲಸ ಮಾಡುವಾಗ ಗ್ರಾಹಕರ ಎಸ್.ಬಿ ಅಕೌಂಟ್, ಎಫ್.ಡಿ ಅಕೌಂಟ್, ಸಿ.ಸಿ ಅಕೌಂಟ್ ಮತ್ತು ಓ.ಡಿ ಅಕೌಂಟ್ ರ ರೂ. **13,80,671/-** ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ.

ದಿಃ **25-11-2015** ರಂದು ಗ್ರಾಹಕರಾದ ಬಿ.ಎಸ್ ಚಂದ್ರಶೇಖರ್/ಚಾ.ಸಾ **10** ರವರು ಅವರ ಹೆಂಡತಿ ಎಲ್.ಛಾಯರವರ ಪಾಸ್ ಬುಕ್ ನ್ನು ಅಪ್-ಡೇಟ್ ಮಾಡಿಸಲು ಬ್ಯಾಂಕ್ ಗೆ ಬಂದಿರುತ್ತಾರೆ. ಅವರು ಅವರ ಪಾಸ್ ಬುಕ್ ನ್ನು ಅಪ್-ಡೇಟ್ ಮಾಡಿದ ನಂತರ ಪರಿಶೀಲಿಸಿದಾಗ ಅದರಲ್ಲಿರುವ ಡೀಟೈಲ್ಸ್ ಗಳು ಅವರ ಖಾತೆಯದ್ದು ಅಲ್ಲ ಎಂದು ಅವರಿಗೆ ಗೊತ್ತಾಯಿತು. ಆಗ ಅವರು ಬ್ಯಾಂಕ್ ಮ್ಯಾನೇಜರ್ ಆದ ಚಾ.ಸಾ **9** ರವರನ್ನು ಭೇಟಿಯಾಗಿ ಅವರಿಗೆ ಪಾಸ್ ಬುಕ್ ನಲ್ಲಿ ಆಗಿರುವ ಎಂಟ್ರಿಗಳು ತಮಗೆ ಸಂಬಂಧಿಸಿದ್ದು ಅಲ್ಲ ಎಂದು ತಿಳಿಸಿರುತ್ತಾರೆ. ಆಗ ಚಾ.ಸಾ **9** ರವರು ಚಾ.ಸಾ **10** ರವರಿಗೆ ಸದರಿ ವಿಚಾರ ತಿಳಿಸಿ ಆ ಬಗ್ಗೆ ಮಾಹಿತಿಯನ್ನು ಪಡೆದುಕೊಂಡು ಹೇಳಿ ಎಂದು ತಿಳಿಸಿರುತ್ತಾರೆ. ನಂತರ ಚಾ.ಸಾ **9** ರವರು ಚಾ.ಸಾ **10** ರವರ ಖಾತೆಗೆ ಸಂಬಂಧಿಸಿದ

ಡೆಬಿಟ್ ಮತ್ತು ಕ್ರೆಡಿಟ್ ಓಚರ್ ಗಳನ್ನು ತರಿಸಿ ನೋಡಿರುತ್ತಾರೆ. ಆಗ ಅವರಿಗೆ ಚಾ.ಸಾ 10 ಮತ್ತು 11 ರವರ ಖಾತೆಯಿಂದ ಜಗದೀಶ್/ಚಾ.ಸಾ 16 ಮತ್ತು ರಾಘವೇಂದ್ರ/ಚಾ.ಸಾ 17 ರವರ ಖಾತೆಗೆ ಜಮಾ ಮಾಡಿರುವುದು ಕಂಡು ಬಂದಿರುತ್ತದೆ. ಸದರಿ ಹಣದ ವರ್ಗಾವಣೆ ಆರೋಪಿಯ ಐಡಿ ಅಡಿಯಲ್ಲಿ ಆಗಿರುತ್ತದೆ. ಆ ಬಗ್ಗೆ ತನಿಖೆ ಮಾಡಿದಾಗ ಸದರಿ ಗ್ರಾಹಕರು ಚೆಕ್ ಬುಕ್ ಹೊಂದಿದ್ದರು ಸಹ ಆರೋಪಿ ವಿತ್ಡ್ರಾ ಸ್ಲಿಪ್ ಮತ್ತು ಪೇಮೆಂಟ್ ಸ್ಲಿಪ್ ನ್ನು ಅವರ ಹೆಸರಿನಲ್ಲಿ ತಾನೇ ಬರೆದು, ತಾನೇ ಸಹಿ ಮಾಡಿ ವ್ಯವಹರಿಸಿರುತ್ತಾರೆಂದು ಕಂಡು ಬಂದಿರುತ್ತದೆ. ಚಾ.ಸಾ 10 ರವರ ಖಾತೆಯಲ್ಲಿರುವ ರೂ. 20 ಲಕ್ಷಗಳನ್ನು ರಕ್ಷಣೆಗಾಗಿ ಹೋಲ್ಡ್ ಮಾಡಿರುತ್ತಾರೆ. ಅದೇ ರೀತಿ ಚಾ.ಸಾ 16 ರವರ ಖಾತೆಯಲ್ಲಿರುವ ರೂ. 4 ಲಕ್ಷಗಳನ್ನು ರಕ್ಷಣೆಗಾಗಿ ಹೋಲ್ಡ್ ಮಾಡಿರುತ್ತಾರೆ. ನಂತರ ಸದರಿ ವಿಚಾರ ನಮ್ಮ ರೀಜನಲ್ ಕಛೇರಿಗೆ ತಿಳಿಸಿರುತ್ತಾರೆ.

ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಆದ ವಿ. ಅಬೀದ್ ಹುಸೇನ್ ರವರು ದಿಃ 25-11-2015 ರಂದು ಸಂಜೆ ನನ್ನನ್ನು ಮತ್ತು ಚಾ.ಸಾ 8 ರವರನ್ನು ಕರೆದು ದಿಃ 26-11-2015 ಮತ್ತು 27-11-2015 ಕ್ಕೆ ಸದರಿ ಶಾಖೆಗೆ ಭೇಟಿ ನೀಡಿ ಆ ಬಗ್ಗೆ ವಿಚಾರಣೆ ಮಾಡಿ ವರದಿ ನೀಡುವಂತೆ ನಮಗೆ ತಿಳಿಸಿರುತ್ತಾರೆ. ಅದರಂತೆ ನಾವು ಹೊಸಪೇಟೆ ಶಾಖೆಗೆ ಭೇಟಿ ನೀಡಿ ತನಿಖೆ ಮಾಡಿದಾಗ ಚಾ.ಸಾ 10 ಮತ್ತು 11 ರವರ ಡೆಬಿಟ್ ಓಚರ್ ಮತ್ತು ಪೇಯಿಂಗ್ ಸ್ಲಿಪ್ ಗಳನ್ನು ಆರೋಪಿ ಸೃಷ್ಠಿ ಮಾಡಿ ಚಾ.ಸಾ 16 ಮತ್ತು 17 ರವರ ಖಾತೆಗೆ ಹಣವನ್ನು ಜಮಾ ಮಾಡಿರುತ್ತಾರೆ. ನಂತರ ಆರೋಪಿ ಚಾ.ಸಾ 16 ಮತ್ತು 17 ರವರ ಎ.ಟಿ.ಎಂ ಕಾರ್ಡ್ ನ್ನು ಬಳಸಿ ಸದರಿ ಹಣ ವಿತ್ಡ್ರಾ ಮಾಡಿಕೊಂಡಿರುತ್ತಾರೆ. ಚಾ.ಸಾ 10 ಮತ್ತು 11 ರವರ ಎಫ್.ಡಿ ಖಾತೆಗೆ ಸಂಬಂಧಿಸಿದಂತೆ ಡ್ಯೂಪ್ಲಿಕೇಟ್ ಅಡ್ವೈಜ್ ನ್ನು ಅದಕ್ಕೆ ಇರುವ ಪ್ರಕ್ರಿಯೆಯನ್ನು ಅನುಸರಿಸದೆ ಇಶ್ಯೂ ಮಾಡಿರುತ್ತಾರೆ. ಸದರಿ ಡ್ಯೂಪ್ಲಿಕೇಟ್ ಅಡ್ವೈಜ್ ನ್ನು ಪ್ರೀಮೆಚ್ಯೂರ್ ಕ್ಲೋಸ್ ಮಾಡಿ ಚಾ.ಸಾ 10 ಮತ್ತು 11 ರವರ ಖಾತೆಗೆ ಜಮಾ ಮಾಡಿರುತ್ತಾರೆ. ಆ ರೀತಿ ಪ್ರೀಮೆಚ್ಯೂರ್ ಕ್ಲೋಸ್ ಮಾಡಲು ಚಾ.ಸಾ 10 ಮತ್ತು 11 ರವರಿಂದ ಯಾವುದೇ ಅರ್ಜಿ ಪಡೆದಿರುವುದಿಲ್ಲ. ಸದರಿ ಎಫ್.ಡಿ ಅಮೌಂಟ್ ನ್ನು ಚಾ.ಸಾ 16 ಮತ್ತು 17 ರವರ ಖಾತೆಗೆ ಜಮಾ ಮಾಡಿ ಅವರ ಎ.ಟಿ.ಎಂ ನ್ನು ಉಪಯೋಗಿಸಿ ಆರೋಪಿ ಸದರಿ

ಹಣ ವಿತ್ಡ್ರಾ ಮಾಡಿಕೊಂಡಿರುತ್ತಾರೆ. ಅದೇ ರೀತಿ ಚಾ.ಸಾ 9 ರಿಂದ 15 ರವರ ಒಟ್ಟು 7 ಖಾತೆಗಳಲ್ಲಿ ಈ ರೀತಿ ವ್ಯವಹಾರ ಮಾಡಿರುತ್ತಾರೆ.

ನಂತರ ನಾವು ಡೆಬಿಟ್ ಓಚರ್, ಪೇಯಿಂಗ್ ಸ್ಲಿಪ್ ಗಳ ಜೆರಾಕ್ಸ್ ಮಾಡಿ, 9 ಅಕೌಂಟ್ ಸ್ಟೇಟ್ಮೆಂಟ್ ಮತ್ತು ಸ್ಪೆಸಿಮನ್ ಸಿಗ್ನೇಚರ್ ನ್ನು ಲಗತ್ತಿಸಿ ವರದಿ ತಯಾರು ಮಾಡಿ ಅದನ್ನು ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಆದ ವಿ. ಅಬೀದ್ ಹುಸೇನ್ ರವರಿಗೆ ನೀಡಿರುತ್ತೇವೆ. ನಮ್ಮ ವರದಿ ಆಧಾರದ ಮೇಲೆ ದಿಃ 07-12-2015 ರಂದು ಆರೋಪಿಯನ್ನು ನಿಲಂಬಿತ ಮಾಡಲಾಗಿರುತ್ತದೆ. ಆರೋಪಿಯು ದುರುಪಯೋಗಪಡಿಸಿಕೊಂಡಿರುವ ರೂ. 13,80,671/- ಹಣ ವಸೂಲಾಯಿತಿ ಆಗಿರುತ್ತದೆ.

ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಆದ ವಿ. ಅಬೀದ್ ಹುಸೇನ್ ರವರು ನೀಡಿರುವ ಆದೇಶ ಮತ್ತು ಅಥರೈಜೇಷನ್ ಲೆಟರ್ ಮೇರೆಗೆ ದಿಃ 20-12-2015 ರಂದು ನಾನು ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತೇನೆ. ಅದೇ ದಿನ ಎನ್.ಜಿ ಕಾಲೋನಿಯಲ್ಲಿನ ಸಣ್ಣಕ್ಕಿ ವೀರಭದ್ರೇಶ್ವರ ದೇವಸ್ಥಾನದ ಹತ್ತಿರ ಇರುವ ಎಸ್.ಬಿ.ಹೆಚ್, ಹೊಸಪೇಟೆ ಶಾಖೆಯಲ್ಲಿ ಆರೋಪಿ ಕೆಲಸ ಮಾಡುತ್ತಿದ್ದ ಟೇಬಲ್ ಮುಂದುಗಡೆ ಪಂಚರ ಸಮಕ್ಷಮ ಪಂಚನಾಮೆಯನ್ನು 1-00 ರಿಂದ 2-00 ಗಂಟೆಯವರೆಗೆ ಮಾಡಿರುತ್ತಾರೆ.

ದಿಃ 02-02-2016 ರಂದು ಪೊಲೀಸ್ ಠಾಣೆಯಿಂದ ನಮಗೆ ಒಂದು ಪತ್ರ ಬಂದಿರುತ್ತದೆ. ಆ ಪತ್ರದ ಅಡಿಯಲ್ಲಿ 9 ಖಾತೆಗಳ ವಿಳಾಸ, ವಿವರಗಳು, ಸ್ಟೇಟ್ಮೆಂಟ್, ವರದಿ, ಆರೋಪಿಯ ನೇಮಕಾತಿ, ಪೇಮೆಂಟ್ ಓಚರ್ಸ್, ಜಮಾ ಓಚರ್ಸ್ ಮತ್ತು ಎಸ್.ಬಿ.ಹೆಚ್ ಬ್ಯಾಂಕ್ ಬಿಲ್ಡಿಂಗ್ ಸ್ವಂತದ್ದು ಅಥವಾ ಬಾಡಿಗೆಯದ್ದು ಎಂದು ಮಾಹಿತಿ ಕೇಳಿರುತ್ತಾರೆ. ಅದನ್ನು ನಾವು ಕೊಟ್ಟಿರುತ್ತೇವೆ.

ದಿಃ 17-02-2016 ರಂದು ಆರೋಪಿ ಸ್ವತಃ ವಿತ್ಡ್ರಾವೆಲ್ ಫಾರಂ, ಪೇಸ್ಲಿಪ್, ಗ್ರಾಹಕರ ಸಹಿಗಳೊಂದಿಗೆ ಡ್ಯೂಪ್ಲಿಕೇಟ್ ಅಡ್ವೈಜ್ ಇಶ್ಯೂ ಮಾಡಿದ ಬಗ್ಗೆ ನಾನು ಮರುಹೇಳಿಕೆ ನೀಡಿರುತ್ತೇನೆ.

ದಿಃ 15-03-2016 ರಂದು ಬಡಾವಣೆ ಪೊಲೀಸ್ ಠಾಣೆಯಲ್ಲಿ 12-00 ರಿಂದ 1-00 ಗಂಟೆಯವರೆಗೆ ಪಂಚನಾಮೆ ಮಾಡಿ ವಿವಾದಿತ ದಾಖಲೆಗಳನ್ನು ಕ್ಯೂ-1 ರಿಂದ ಕ್ಯೂ-26 ಎಂದು

ಗುರುತಿಸಿ ಜಪ್ತುಪಡಿಸಿಕೊಂಡಿರುತ್ತಾರೆ. ಅದೇ ದಿನ **2-30** ರಿಂದ **4-30** ಗಂಟೆಯವರೆಗೆ ಇನ್ನೊಂದು ಪಂಚನಾಮೆ ಮಾಡಿ **15** ದಾಖಲಾತಿಗಳನ್ನು ವಶಪಡಿಸಿಕೊಂಡಿರುತ್ತಾರೆ.

ಆರೋಪಿ ಗೈರು ಹಾಜರಿದ್ದು ಅವರನ್ನು ನೋಡಿದಲ್ಲಿ ಗುರುತಿಸುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಅವರ ಗುರುತಿಗಾಗಿ ಅವರ ಪರ ವಕೀಲರು ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಸಾಕ್ಷಿ ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ **1** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ **1**-ಎ ಎಂದು, ಸಾಕ್ಷಿ ಕೃತ್ಯ ಸ್ಥಳ ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ **2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ **2**-ಎ ಎಂದು, ಸಾಕ್ಷಿ ಕೃತ್ಯ ಸ್ಥಳ ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ **3** ರಿಂದ **6** ಎಂದು, ಸಾಕ್ಷಿ ವಿವಾದಿತ ದಾಖಲಾತಿಗಳ ಜಪ್ತು ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ **7** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ **7**-ಎ ಎಂದು, ಸದರಿ ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ **8** ಮತ್ತು **9** ಎಂದು, ಸಾಕ್ಷಿ ಇನ್ನೊಂದು ಜಪ್ತು ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ **10** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ **10**-ಎ ಎಂದು, ಸದರಿ ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ **11** ಮತ್ತು **12** ಎಂದು, ಅಥರೈಜೇಷನ್ ಲೆಟರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ **13** ಎಂದು, ದಿಃ **15-03-2016** ರಂದು ಪಿ.ಎಸ್.ಐ, ಬಡಾವಣೆ ಪೊಲೀಸ್ ಠಾಣೆಯವರಿಗೆ ನೀಡಿರುವ ರಿಪ್ಲೈ ನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ **14** ಎಂದು, ಇನಸ್ಪೆಕ್ಟಿಂಗ್ ಆಫೀಶಿಯಲ್ ವಿಳಾಸವನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ **15** ಎಂದು, ಟ್ರಾನ್ಸಫರ್ ಆರ್ಡರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ **16** ಎಂದು, ದಿಃ **12-06-2014** ರ ಆಫೀಸ್ ಆರ್ಡರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ **17** ಎಂದು, ದಿಃ **13-07-2013** ರ ರಿಲೀವಿಂಗ್ ಲೆಟರ್ ನ್ನು ನೋಡಿ ಗುರುತಿಸಿದ್ದು ಅದನ್ನು

ನಿ.ಪಿ **18** ಎಂದು, ದಿಃ **15-07-2013** ರಂದು ಜಾಯಿನಿಂಗ್ ಲೆಟರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ **19** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ರವರು ಇನ್ನು ಕೆಲವು ದಾಖಲಾತಿಗಳ ಗುರುತಿಗಾಗಿ ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ.ಗಳು, ಹೊಸಪೇಟೆ.